ಸಹಜ. ಇಂತಹ ಸಿಟ್ಟಿಗೆ ಪ್ರತಿಕ್ರಿಯೆಯಾಗಿ ಪ್ರತಿಭಟನೆ ಅಥವಾ ಕಡೆಗಣಿಸುವಿಕೆ ಕುಟುಂಬದವರಿಂದ ಹೊರಬಂದಾಗ ವೃದ್ಧಾಪ್ಯ ಅಸಹನೀಯವಾಗುತ್ತದೆ. ಹಾಗಾಗಿ ವೃದ್ಧಾಪ್ಯದ ಮನಶ್ಶಾಂತಿಗೆ ವೈರಾಗ್ಯವೊಂದೇ ಮಾರ್ಗ.

## ವೃದ್ಧಾಪ್ಯದ ಜೀವಂತಿಕೆ

ಅವರಿಗೆ ಸುಮಾರು 70 ವರ್ಷ ವಯಸ್ಸು. ಕಾಯಿಲೆಗಳಿಂದ ದೇಹ ಸ್ವಲ್ಪ ದುರ್ಬಲವಾಗಿದ್ದರೂ ಬುದ್ಧಿ ಚುರುಕಾಗಿಯೇ ಇತ್ತು. ಆದರೆ ಇತ್ತೀಚೆಗೆ ಅವರು ಹೆಚ್ಚು ಅಂತರ್ಮುಖಿಯಾಗುತ್ತಾ ಬಂದಾಗ ಕುಟುಂಬದವರಿಗೆ ಆತಂಕವಾಗಿ ನನ್ನ ಸಹಾಯ ಕೇಳಿದರು. ಆರಂಭದ ಕುಶಲೋಪರಿಯ ನಂತರ ನಾನು ಅವರ ಜೀವನದ ವಸಂತ ಕಾಲದ ನೆನಪುಗಳನ್ನು ಕೆದಕುತ್ತಾ ಹೋದೆ. ಅವರು ಖುಷಿಯಿಂದ ಹಂಚಿಕೊಳ್ಳುತ್ತಾ ಹೋದರು. ಮಾತಿನ ಮಧ್ಯೆ ಆ ಎಲ್ಲ ದಿನಗಳನ್ನು ಕಳೆದುಕೊಂಡ ವಿಷಾದದ ಛಾಯೆ ಇಣುಕುತ್ತಿದ್ದರೂ ಅವರು ಎಂದಿಗಿಂತ ಹೆಚ್ಚು ಹುರುಪಿನಲ್ಲಿದ್ದರು.

'ನಿಮ್ಮ ಆರೋಗ್ಯ ಚೆನ್ನಾಗಿದ್ದು ನಿಮಗೆ ಎಲ್ಲಾ ಚಟುವಟಿಕೆಗಳು ಸಾಧ್ಯವಾಗಿದ್ದರೆ ಏನೇನು ಮಾಡುತ್ತಿದ್ದಿರಿ?' ಎನ್ನುವ ಪ್ರಶ್ನೆ ಮುಂದಿಟ್ಟೆ. ಅವರು ಹಲವಾರು ಸಾಧ್ಯತೆಗಳ ಬಗೆಗೆ ಮಾತನಾಡಿದರು. ಇವುಗಳಲ್ಲಿ 'ನಿಮ್ಮ ಈಗಿನ ಸ್ಥಿತಿಯಲ್ಲಿ ಮಾಡಬಹುದಾದ್ದು ಯಾವುವು?' ಎಂದು ಕೇಳಿದಾಗ ಅವರು ಕೆಲವು ಚಟುವಟಿಕೆಗಳನ್ನು ಹೆಸರಿಸಿದರೂ ತಕ್ಷಣ 'ಅಯ್ಯೋ ಅದರ



ಸಂಗಾತಿ ಜೊತೆಗಿದ್ದರೆ ಏಕಾಂಗಿತನಕ್ಕೆಲ್ಲಿದೆ ತಾವು!

ಬಗೆಗೆ ಈಗೇಕೆ ಮಾತನಾಡೋದು, ಈಗಲೋ ಆಗಲೋ ಸಾಯುವ ವಯಸ್ಸು ನನ್ನದು' ಎನ್ನುತ್ತಾ ಮತ್ತೆ ಅಂತರ್ಮುಖಿಯಾಗತೊಡಗಿದರು.



